ಶ್ರೀ ಮಂಜುನಾಥ್ ಸಿ. ಕುನ್ನೂರ್:- ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಎಷ್ಟು ತ್ರಿವರ್ಣ ಧ್ವಜ ಕಾರ್ಡು, ಹಾಗೂ ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ ಎಂಬ ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ತ್ರಿವರ್ಣ ಧ್ವಜ ಕಾರ್ಡು ೨೭,೫೧,೩೩೨ ಕೇಸರಿ ಪಡಿತರ ಚೀಟಿಗಳು ೨೭,೫೨,೨೮೪ ಎಂದು ಹೇಳಿದ್ದಾರೆ, ಮತ್ತು ಧಾರವಾಡ ಜಿಲ್ಲೆಯಲ್ಲಿ ೨೫೭೩೭೨ ಹಾಗೂ ಕೇಸರಿ ಕಾರ್ಡು ೧,೪೪,೮೬೪ ಎಂದು ಹೇಳಿದ್ದಾರೆ. ತಾಲ್ಲೂಕುವಾರು ವಿವರವನ್ನು ಕೇಳಿದಾಗ, ಸವಣೂರು ತಾಲ್ಲೂಕಿನಲ್ಲಿ ಈ ತ್ರಿವರ್ಣ ಧ್ವಜ ಕಾರ್ಡುಗಳನ್ನು ನನ್ನ ಮತ ಕ್ಷೇತ್ರದಲ್ಲಿ ೧೦,೩೮೬ ಕಾರ್ಡುಗಳು ಹಾಗೂ ಶಿಗ್ಗಾಂವ್ ತಾಲ್ಲೂಕಿನಲ್ಲಿ ೧೧೬೫೨ ಕಾರ್ಡು ಎಂದು ಹೇಳಿದ್ದಾರೆ. ಈ ಅಂಕಿ ಸಂಖ್ಯೆಗಳನ್ನು ನೋಡಿದಾಗ ಸರಿಯಾದ ಅರ್ಹ ಫಲಾನುಭವಿಗಳಿಗೆ ಕಾರ್ಡುಗಳನ್ನು ಕೊಟ್ಟಿರುವುದಿಲ್ಲ. ಮತ್ತು ಧಾರವಾಡ ಜಿಲ್ಲೆಯಲ್ಲಿ ಇವತ್ತು ಕನಿಷ್ಠ ಪಕ್ಷ ೫ ಲಕ್ಷ ಅರ್ಹ ಫಲಾನುಭವಿಗಳಿಗೆ ಕಾರ್ಡುಗಳನ್ನು ಕೊಡದೇ ಇರುವಂಥ ವ್ಯವಸ್ಥೆಯಾಗಿದೆ. ಈ ಕಾರಣದಿಂದ ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಇದರಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್:- ನನ್ನ ಮತ ಕ್ಷೇತ್ರಗಳಾದ ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ೧೦,೩೮೬, ೧೧,೬೫೬ ಕಾರ್ಡುಗಳನ್ನು ಈಗಾಗಲೇ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಈವರೆಗೆ ಕಾರ್ಡುಗಳ ಹಂಚಿಕೆ ಆಗಿರುವುದಿಲ್ಲ. ಆ ಕಾರಣದಿಂದ ಕಾರ್ಡುಗಳನ್ನು ಕೊಡಬೇಕು ಮತ್ತು ರೀಸರ್ವೆ ಮಾಡಿ ಪುನಃ ಅದನ್ನು ಪರಿಶೀಲಿಸಿ ಅವರಿಗೆ ಕಾರ್ಡುಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಸರಿಪಡಿಸುತ್ತೇವೆ.

ವಿಷಯ:- ಹರಿಜನರ ಮೇಲೆ ಹಲ್ಲೆ ಹಾಗೂ ಸಾಮೂಹಿಕ ಬಹಿಷ್ಕಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬:- (೨೪೧)
ಶ್ರೀಮತಿ ಮೋಟಮ್ಮ (ಮೂಡಿಗೆರೆ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಇತ್ತೀಚಿನ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವಯಾವ ಜಿಲ್ಲೆಗಳಲ್ಲಿ ಹರಿಜನರ ಮೇಲೆ ದೌರ್ಜನ್ಯ ಹಾಗೂ ಸಾಮೂಹಿಕ ಬಹಿಷ್ಕಾರ ಪ್ರಕರಣಗಳು ನಡೆದಿದೆ?
ಆ) ಅದಕ್ಕೆ ಕಾರಣಗಳೇನು?
ಇ) ಇಂತಹ ಪ್ರಕರಣಗಳು ಪುನಃ ಪುನಃ ಮರುಕಳಿಸದಂತೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲೂ ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು ಸುಮಾರು ೧೦ ಜಿಲ್ಲೆಗಳಲ್ಲಿ ಗುರುತರವಾದ ೧೬ ದೌರ್ಜನ್ಯ ಪ್ರಕರಣಗಳು ನಡೆದಿದೆ. ಬಹಿಷ್ಕಾರ ಪ್ರಕರಣಗಳು ವರದಿಯಾಗಿರುವುದು ಕಂಡು ಬಂದಿರುವುದಿಲ್ಲ.

ಅನುಬಂಧ 'ಅ'ನ್ನಲ್ಲಿ ನೀಡಲಾಗಿದೆ.

ಅನುಬಂಧ 'ಅ'ನ್ನಲ್ಲಿ ನೀಡಲಾಗಿದೆ.

ಅನುಬಂಧ - ಅ

	ಘಟನೆ ನಡೆದ ದಿನಾಂಕ	ದರ್ಜನ್ಯ ಪ್ರಕರಣಗಳಿಗೆ ಕಾರಣಗಳು
೧) ಚಿಕ್ಕಮಗಳೂರು ಜಿಲ್ಲೆ ಬಸಗೋಡು ಗ್ರಾಮ	೯.೨.೯೦	ಮಾರಮ್ಮನ ಜಾತ್ರೆಯಲ್ಲಿ ಹರಿಜನ ಕೇರಿಗೆ ಮಾರಮ್ಮನ ಮೆರವಣಿಗೆ ಕೊಂಡೊಯ್ಯುವ ವಿಷಯದಲ್ಲಿ ವಿವಾದ ಉಂಟಾಗಿ ಗಲಭೆಗೆ ಕಾರಣವಾಗಿರುತ್ತದೆ.
೨) ಮಂಡ್ಯ ಜಿಲ್ಲೆ ರಾಗಿಬೊಮ್ಮನಹಳ್ಳಿ	೬.೪.೯೦	ಬಗರ್‌ಹುಕುಂ ಜಮೀನಿನಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದ ವಿಷಯದಲ್ಲಿ ಸವರ್ಣೀಯರು ಹಾಗೂ ಹರಿಜನರ ನಡುವೆ ಗಲಭೆಯಾಗಿರುತ್ತದೆ.
೩) ಚಿಕ್ಕಮಗಳೂರು ಜಿಲ್ಲೆ ಬಲೇಕದಳ್ಳಿ	೧೪.೩.೯೦	ಟಿ.ವಿ.ಯಲ್ಲಿ ಚಲನಚಿತ್ರ ನೋಡುವಾಗ ಕುರುಬ ಜನಾಂಗ ಹಾಗೂ ಹರಿಜನರಿಗೆ ನಡೆದ ಜಾತಿಯ ವಿಷಯದಲ್ಲಿ ಗಲಭೆಯಾಗಿರುತ್ತದೆ.
೪) ಮಂಡ್ಯ ಜಿಲ್ಲೆ ಕಾಡುಕೊತ್ತನಹಳ್ಳಿ	೨೭.೩.೯೦	ಶಿವರಾತ್ರಿ ಹಬ್ಬದ ಪ್ರಯುಕ್ತ ಮೆರವಣಿಗೆಯ ಸಂದರ್ಭದಲ್ಲಿ ಮರದ ವಿಗ್ರಹ ಹಾಗೂ ಲೋಹದ ವಿಗ್ರಹದ ಮೆರವಣಿಗೆಯ ಬಗ್ಗೆ ವಿವಾದ ಬೆಳೆದು ಹರಿಜನರ ಮತ್ತು ಸವರ್ಣೀಯರ ನಡುವೆ ಗಲಭೆಯಾಗಿರುತ್ತದೆ.
೫) ಬಳ್ಳಾರಿ ಜಿಲ್ಲೆ ಸಂಗನಕಲ್ಲು ಗ್ರಾಮ	೨೯.೪.೯೦	ಹಳೆಯ ದ್ವೇಷದಿಂದ ಹಾಗೂ ಹರಿಜನರಿಗೆ ಕಾಫಿ, ಟೀ ಕುಡಿಯುವ ಲೋಟದ ಬಗ್ಗೆ ಹರಿಜನರ ಹಾಗೂ ಇತರ ಜನಾಂಗದವರಿಗೆ ಗಲಭೆಯಾಗಿರುತ್ತದೆ.
೬) ಧಾರವಾಡ ಜಿಲ್ಲೆ ಸೊರಟೂರು ಗ್ರಾಮ	೨೭.೭.೯೦	ರೈತರ ಸಂಘಕ್ಕೆ ಸೇರಲು ಹರಿಜನರನ್ನು ಕೇಳಿದ್ದಕ್ಕೆ ಹರಿಜನರು ಸಂಘಕ್ಕೆ ಸೇರಲು ನಿರಾಕರಿಸಿದ ಕಾರಣ ಗಲಭೆಗೆ ಕಾರಣವಾಗಿರುತ್ತದೆ.
೭) ಬೆಳಗಾಂ ಜಿಲ್ಲೆ ಬೆಲ್ಲದಬಾಗೇವಾಡಿ	೧೫.೬.೯೧	ಕಾಂಗ್ರೆಸ್ ಮತ್ತು ಜನತಾ ದಳದ ಮಧ್ಯೆ ನಡೆದ ಗಲಾಟೆ ಕೋಮು ಗಲಭೆಯಾಗಿ ಅಂತ್ಯವಾಗಿರುತ್ತದೆ.

೮)ವಿಜಾಪುರ ಜಿಲ್ಲೆ ಹದಿನಾಳ	೨೨.೭.೯೧	ಹರಿಜನರು ಆ ಊರಿನಲ್ಲಿ ಪ್ರಭಾವಿಗಳಾಗುವುದನ್ನು ಸಹಿಸದೇ ಸವರ್ಣೀಯರು ಅವರ ಮೇಲೆ ದ್ವೇಷ ಸಾಧಿಸಲು ಹೊರಟ ಕಾರಣ ಈ ಗಲಭೆಗೆ ಕಾರಣವಾಗಿರುತ್ತದೆ.
೯)ತಾಂಬೊಡ್ಡಿ	೧೨.೧೦.೯೧	ಹರಿಜನ ಕೇರಿಗೆ ಗಾಡಿ ಹೊಡೆದುಕೊಂಡು ಹೋಗುವಾಗ ಸವರ್ಣೀಯನೊಬ್ಬ ಅಸಭ್ಯವಾಗಿ ವರ್ತಿಸಿ ಜಾತಿ ನಿಂದನೆ ಮಾಡಿದ ಸಂದರ್ಭದಲ್ಲಿ ಉಂಟಾದ ಗಲಭೆ.
೧೦) ಗುಲ್ಬರ್ಗ ಜಿಲ್ಲೆ	೩.೧೧.೯೧	ಹರಿಜನ ಕೂಲಿಕಾರನು ತಾನು ಮಾಡಿದ ಕೆಲಸಕ್ಕೆ ಸರಿಯಾದ ಕೂಲಿಕೊಡುವಂತೆ ಒತ್ತಾಯಿಸಿದಾಗ ನಡೆದ ಮಾತುಕತೆಯಿಂದಾಗಿ ಗಲಭೆಗೆ ಕಾರಣ.
೧೧) ಮೈಸೂರು ಜಿಲ್ಲೆ	೭.೧೧.೯೧	ಸಿನಿಮಾ ಟಿಕೆಟ್ ನೀಡದಿದ್ದುದರ ವಿಷಯವಾಗಿ ಮಾತಿಗೆ ಮಾತು ಬೆಳೆದು ಸವರ್ಣೀಯರಿಗೂ ಹಾಗೂ ಹರಿಜನರಿಗೂ ಗಲಾಟೆಯಾಗಿರುತ್ತದೆ.
೧೨) ಧಾರವಾಡ ಜಿಲ್ಲೆ	೭.೧೨.೯೧	ಸುಮಾರು ೧೮ ವರ್ಷದ ಬಾಲಕಿಯನ್ನು ಹರಿಜನ ಯುವಕನೊಬ್ಬ ಬಲಾತ್ಕಾರವಾಗಿ ಕರೆದೊಯ್ದ ವಿಷಯದಿಂದ ತಲೆದೋರಿದ್ದಾಗಿರುತ್ತದೆ.
೧೩) ರಾಯಚೂರು ಜಿಲ್ಲೆ	೨೩.೫.೯೨	ಹೋಟೆಲ್ ಮಾಲೀಕನೊಬ್ಬ ಹರಿಜನರಿಗೆ ಕಾಫಿ, ಟೀಯನ್ನು ಹೊರಗಡೆ ಕೊಡುತ್ತಿದ್ದುದರ ವಿಷಯವಾಗಿ ಹಬ್ಬಿದ ಗಲಭೆ
೧೪) ಗುಲ್ಬರ್ಗ ಜಿಲ್ಲೆ, ಕಳ್ಳಗಿ ಬಿ.ಹಳ್ಳಿ	೩.೬.೯೨	ಹಳ್ಳಿಯ ಲಕ್ಷ್ಮಿ ದೇವತೆಗೆ ಪ್ರಾಣಿ ಬಲಿಕೊಡುವ ವಿಷಯವಾಗಿ ಶುರುವಾದ ಗಲಾಟೆ.
೧೫) ವಿಜಾಪುರ ಜಿಲ್ಲೆ ತುಂಬಾ ಗ್ರಾಮ	೬.೭.೯೨	ಕೊಳವೆ ಬಾವಿಯಲ್ಲಿ ನೀರು ಹಿಡಿಯುವಾಗ ಎರಡು ಪಂಗಡದವರಿಗೂ ಉಂಟಾದ ವೈಮನಸ್ಯ.
೧೬) ಗುಲ್ಬರ್ಗ ಜಿಲ್ಲೆ ದೇವರಗಣಗಾಪುರ	೧೬.೭.೯೨	ಹಿಂದೂ ಜನಾಂಗದವನೊಬ್ಬ ಹಿಂದೂ ದಲಿತ ಜನಾಂಗದವರೊಬ್ಬರು ಪರಸ್ಪರ ಜಗಳವಾಡಿದ ಹಿನ್ನಲೆಯಲ್ಲಿ ನಡೆದ ಗಲಭೆ.

ಅನುಬಂಧ - ಅ

ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮದ ವಿವರ

೧) ಹರಿಜನ ಕೇರಿಗಳಿಗೆ ಪೋಲೀಸ್ ಪೇದೆಗಳಿಂದ ಹಿಡಿದು ಡಿ.ಐ.ಜಿ.ವರೆಗಿನ ಅಧಿಕಾರಿಗಳನ್ನು ಆಗಿಂದಾಗ್ಗೆ ಭೇಟಿ ನೀಡಿ ಅಲ್ಲಿಯ ಜನರ ಕುಂದುಕೊರತೆಗಳನ್ನು ವಿಚಾರಿಸಿಕೊಂಡು ಬರುತ್ತಾರೆ.

೨) ದೌರ್ಜನ್ಯ ಪ್ರಕರಣಗಳು ಉದ್ಭವಿಸಿದ್ದ ತಕ್ಷಣ ಪೋಲೀಸರು ಸ್ಥಳಕ್ಕೆ ಹೋಗಿ ಅಲ್ಲಿ ಬಂದೋಬಸ್ತ್ ವ್ಯವಸ್ಥೆ ಏರ್ಪಡಿಸುವುದರ ಜೊತೆಗೆ ಗಲಭೆಗೆ ಕಾರಣರಾದವರ ಮೇಲೆ ದೌರ್ಜನ್ಯ ಪ್ರಕರಣ ಕಾಯ್ದೆಯಡಿಯಲ್ಲಿ ಕೇಸು ದಾಖಲು ಮಾಡಿಕೊಂಡು ಅಪರಾಧಿಗಳನ್ನು ಪತ್ತೆಹಚ್ಚಿ ನ್ಯಾಯಾಲಯಕ್ಕೆ ಹಾಜರುಪಡಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಲಾಗುತ್ತಿದೆ. ಇಂತಹ ಪ್ರಕರಣಗಳಲ್ಲಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಗಳು ಸ್ಥಳೀಯ ಪೋಲೀಸರಿಗೆ ಸೂಕ್ತ ನಿರ್ದೇಶನ ನೀಡಿ ಸಹಾಯ ಮಾಡುತ್ತಾರೆ.

೩) ಸರ್ಕಾರವು ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ ಹಾಗೂ ವಿಭಾಗೀಯ ಮಟ್ಟದಲ್ಲಿ ಕಮಿಟಿಗಳನ್ನು ನೇಮಿಸಿ ಹರಿಜನ ಕೇರಿಗಳಲ್ಲಿ ಕುಂದುಕೊರತೆಗಳನ್ನು ವೀಕ್ಷಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತದೆ.

೪) ಇದರ ಜೊತೆಗೆ ಉನ್ನತಮಟ್ಟದ ಕಮಿಟಿಯೊಂದನ್ನು ಮಾಡಿಕೊಂಡು, ಗೃಹ ಕಾರ್ಯದರ್ಶಿ, ಸಮಾಜಕಲ್ಯಾಣ ಇಲಾಖೆ ಕಾರ್ಯದರ್ಶಿ, ಕಾನೂನು ಪರಪಾಲನಾ ಕಾರ್ಯದರ್ಶಿ, ಡಿ.ಜಿ.ಪಿ.ಕೈ ಮತ್ತು ಟ್ರೈನಿಂಗ್, ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ, ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಮುಂತಾದವರನ್ನು ಒಳಗೊಂಡಂತೆ ಸಭೆ ಸೇರಿ ಹರಿಜನ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವ ಕಾರ್ಯಕ್ರಮ ಜಾರಿಯಲ್ಲಿದೆ.

೫) ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಅಪರಾಧಿಗಳಿಗೆ ಆದಷ್ಟು ಬೇಗ ಶಿಕ್ಷೆ ವಿಧಿಸಲು ಸಲುವಾಗಿ ಸರ್ಕಾರ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದ್ದು ಈಗಾಗಲೇ ಬೆಳಗಾಂ, ಮೈಸೂರು, ರಾಯಚೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯವು ಜಿಲ್ಲಾ ನ್ಯಾಯಾಧೀಶರುಗಳನ್ನು ನೇಮಕ ಮಾಡಿಕೊಂಡು ಕಾರ್ಯ ಪ್ರವೃತವಾಗಿದೆ. ಇದರಿಂದ ಹರಿಜನರ ಮೇಲಿನ ದೌರ್ಜನ್ಯ ಪ್ರಕರಣಗಳು ಬೇಗ ಇತ್ಯರ್ಥವಾಗುತ್ತಾ ಅಪರಾಧಿಗಳಿಗೆ ಸೂಕ್ತ ಶಿಕ್ಷೆಯಾಗಲು ಸಹಕಾರಿಯಾಗಿದೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಪ್ರಶ್ನೆ ಕೇಳುವಾಗ ಬಹಳ ಸ್ಪಷ್ಟವಾಗಿ ಕೇಳಿದ್ದೇನೆ. ಈ ರಾಜ್ಯದಲ್ಲಿ ಇದುವರೆಗೆ ಸಾಮೂಹಿಕ ದೌರ್ಜನ್ಯಗಳು ಏನು ಆಗಿದೆ ಎಷ್ಟು ಪ್ರಕರಣಗಳು ಯಾವ ಯಾವ ಜಿಲ್ಲೆಗಳಲ್ಲಿ ಆಗಿವೆ ಮತ್ತು ಎಷ್ಟು ಪ್ರಕರಣಗಳಲ್ಲಿ ಹರಿಜನ ಗಿರಿಜನರಿಗೆ ಬಹಿಷ್ಕಾರ ಹಾಕಲಾಗಿದೆ ಎಂದು ಕೇಳಿದ್ದೇನೆ. ಆದರೆ ಸಚಿವರ ಉತ್ತರದಲ್ಲಿ ಯಾವ ಯಾವ ಪ್ರಕರಣಗಳಲ್ಲಿ ಬಹಿಷ್ಕಾರ ಹಾಕಲಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಆದರೆ ಬೇರೆ ಬೇರೆ ಜಿಲ್ಲೆಗಳ ೧೪ ಪ್ರಕರಣಗಳು ಆಗಿದೆ ಎಂದು ಒಂದು ಪಟ್ಟಿ ಇದೆ. ಕಾರಣಗಳನ್ನು ಹೇಳಿದ್ದಾರೆ. ಯಾವ ಯಾವ ಪ್ರಕರಣಗಳಲ್ಲಿ ದೌರ್ಜನ್ಯದ ಬಗ್ಗೆ

ಹರಿಜನರಿಗೆ ಬಹಿಷ್ಕಾರ ಹಾಕಲಾಗಿದೆ ಎನ್ನುವುದು ಸ್ಪಷ್ಟವಾಗಿ ಬೇಕು. ಎರಡನೆಯದು, ಉತ್ತರದಲ್ಲಿ ಹರಿಜನ ಕೇರಿಗಳಿಗೆ ಪೋಲೀಸ್ ಪೇದೆಗಳಿಂದ ಹಿಡಿದು ಡಿ.ಐ.ಜಿ. ವರೆಗೆ ಅಧಿಕಾರಿಗಳು ಆಗಿಂದ್ದಾಗ್ಗೆ ಭೇಟಿ ಮಾಡಿ ಅಲ್ಲಿಯ ಜನರ ಕುಂದುಕೊರತೆಗಳನ್ನು ವಿಚಾರಿಸುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ನಿಜವಾಗಲೂ ಇಲ್ಲಿರುವ ಯಾರೇ ಶಾಸಕರು ವಿಚಾರ ಮಾಡಿದರೂ ಅದು ಅರಿವು ಆಗಬಹುದು. ನಿಜವಾಗಲೂ ಇದು ಸತ್ಯಕ್ಕೆ ದೂರವಾದ ಸಂಗತಿ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ವಿಚಾರ ಮಾಡಬೇಕು.

೧೧.೩೫ ವಿ.ಎಂ.

ಏಕೆಂದರೆ, ಯಾವ ಪೋಲೀಸ್ ಕಾನ್ಸ್‌ಟೇಬಲ್ ಆಗಲಿ, ಎಸ್.ಪಿ. ಆಗಲಿ ಸುಮ್ಮ ಸುಮ್ಮನೆ ಯಾವ ಹರಿಜನ ಗಿರಿಜನ ಕೇರಿಗಳಿಗೆ ಹೋಗಿ ಇದುವರೆಗೂ ಅವರಿಗೆ ಧೈರ್ಯ, ಸಮಾಧಾನ ಹೇಳಿ ಅವರ ಕುಂದುಕೊರತೆಗಳನ್ನು ಕೇಳಿಲ್ಲ. ಇಂತಹ ಪ್ರಕರಣಗಳು ಆದಾಗ ಎಲ್ಲರೂ ಭೇಟಿ ಮಾಡುವುದು ಸಹಜ, ರಾಜಕಾರಣಿಗಳು ಹೋಗಿ ಭೇಟಿ ಮಾಡುತ್ತಾರೆ. ಇಂತಹ ಪ್ರಕರಣಗಳು ಆಗದೆ ಇರುವುದಕ್ಕೆ ಯಾವ ರೀತಿ ತಡೆ ಕ್ರಮ ಹಾಕಬೇಕು ಎಂದು ಯೋಚಿಸಬೇಕು. ಇದು ಪುನಃ ಪುನಃ ಆಗುತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಕನಕಪುರ ತಾಲ್ಲೂಕಿನಲ್ಲಿ ಸಂಕ್ರಾಂತಿ ಹಬ್ಬದ ದಿನ ದನಗಳನ್ನು ಕಿಚ್ಚುಹಾಯಿಸುವ ಸಂದರ್ಭದಲ್ಲಿ ಹರಿಜನರಿಗೆ ಮತ್ತು ಮೇಲುವರ್ಗದ ಜನರ ಮಧ್ಯೆ ಗಲಾಟೆ ಆಗಿ ಹರಿಜನರ ಗುಡಿಸಲುಗಳನ್ನು ಸುಟ್ಟಿದ್ದಾರೆ ಅವರಿಗೆ ಬಹಿಷ್ಕಾರ ಹಾಕಿದ್ದಾರೆ. ಮೊನ್ನೆ ಒನೇ ತಾರೀಖು ಚಿಕ್ಕಮಗಳೂರಿನಲ್ಲಿ ಹಬ್ಬದಲ್ಲಿ ಹರಿಜನರು ಜೊತೆಯಲ್ಲಿ ಕುಣಿದದ್ದು ತಪ್ಪು ಎಂದು ಗಲಾಟೆಯಾಗಿ ೧೨ ಜನರಿಗೆ ಪೆಟ್ಟು ಬಿದ್ದಿದೆ. ಗಲಾಟೆ ಪ್ರಕರಣ ಇದೇ ತರಹದ್ದು. ರಾಯಚೂರಿನ ಜಿಲ್ಲೆಯ ಹಿಡಿಕಲೂರಿನಲ್ಲೂ ಆದ ಗಲಾಟೆ ತೆಗೆದುಕೊಳ್ಳಿ, ಅಲ್ಲೂ ಸಹ ಸಾಮೂಹಿಕ ಬಹಿಷ್ಕಾರ ಹಾಕಿದರು. ಆದರೆ ಹೀಗೆ ಬಹಿಷ್ಕಾರಗಳು ಪ್ರತಿದಿನ, ಪ್ರತಿನಿತ್ಯ ಈ ರಾಜ್ಯದಲ್ಲಿ ನಡೆಯುತ್ತಾ ಇದ್ದರೆ ಹರಿಜನರ ಗತಿ ಏನಾಗಬಹುದು. ಇದಕ್ಕೆ ಇಲ್ಲಿ ಹೇಳಿರುವ ಉತ್ತರದಿಂದ ನನಗಂತೂ ಸಮಾಧಾನವಿಲ್ಲ. ಏಕೆಂದರೆ, ತಾಲ್ಲೂಕು ಮಟ್ಟದ ಸಮಿತಿ ಇದೆ, ಮತ್ತು ಜಿಲ್ಲಾ ಮಟ್ಟದ ಸಮಿತಿ ಇದೆ ಎಂದು ಹೇಳುತ್ತಾರೆ. ಇದರ ಜೊತೆಗೆ ಗೃಹ ಕಾರ್ಯದರ್ಶಿಯವರ ನೇತೃತ್ವದಲ್ಲಿ ಉನ್ನತ ಮಟ್ಟದ ಕಮಿಟಿ ಇದೆ. ಈ ಕಮಿಟಿ ಆಗಾಗ ಸಭೆ ಸೇರಿ ಇಂತಹ ದೌರ್ಜನ್ಯಗಳನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲು ಚರ್ಚೆ ನಡೆಸಿದೆ ಎಂದು ಹೇಳಿದ್ದಾರೆ. ನಾನು ಪ್ರಶ್ನೆ ಮಾಡುತ್ತೇನೆ ಇದುವರೆವಿಗೂ ಇಷ್ಟೊಂದು ಪ್ರಕರಣಗಳು ನಡೆದಿವೆ. ಈ ಉನ್ನತ ಮಟ್ಟದ ಕಮಿಟಿ ಈ ರಾಜ್ಯದಲ್ಲಿ ನಡೆದಂತಹ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿ ಕಠಿಣ ಕ್ರಮ ತೆಗೆದುಕೊಳ್ಳಲು ಯಾವ ಸೂಕ್ತ ಕ್ರಮ ತೆಗೆದುಕೊಂಡಿದೆಯೆಂದು ಹೇಳಬೇಕು. ನಾನು ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದೇನೆ. ಕೊನೆಯದಾಗಿ ಹೇಳಿದ್ದಾರೆ. ಇದಕ್ಕಾಗಿ ವಿಶೇಷ ನ್ಯಾಯಾಲಯ ಸ್ಥಾಪನೆಯಾಗಿದೆ. ಬೆಳಗಾಂ, ಮೈಸೂರು, ರಾಯಚೂರು ಹಾಗೂ ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಇದು ಕಾರ್ಯಪ್ರವೃತ್ತವಾಗಿದೆಯೆಂದು ಹೇಳಿದ್ದಾರೆ, ನಾನು ಕೇಳುತ್ತೇನೆ. ಇದರಲ್ಲಿ ಎಷ್ಟು ಪ್ರಕರಣಗಳ ಬಗ್ಗೆ ಅವರು ವಿಚಾರ ಮಾಡಿದ್ದಾರೆ, ಎಷ್ಟು ಪ್ರಕರಣಗಳ ಬಗ್ಗೆ ತೀರ್ಪು ಆಗಿದೆ, ಎಷ್ಟು ಜನರಿಗೆ ಶಿಕ್ಷೆ ಆಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸಭಾಧ್ಯಕ್ಷರೇ, ಅತ್ಯಂತ ವ್ಯಾಕುಲದಿಂದ ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಕೆಲವು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಕೇಳಿದ್ದಾರೆ. ಬಹಿಷ್ಕಾರದ ಪ್ರಕರಣಗಳ ಬಗ್ಗೆ ನಾವು ಉತ್ತರದಲ್ಲಿಯೇ ಕೊಟ್ಟಿದ್ದೇವೆ. ಬಹಿಷ್ಕಾರ ಪ್ರಕರಣಗಳು ವರದಿಯಾಗಿರುವುದು ಕಂಡು ಬಂದಿರುವುದಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದೇವೆ.

ಅದರಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ಪುನಃ ನಾವು ಕೇಳುತ್ತೇವೆ. ಇನ್ನು ನಾವು ಇಲ್ಲಿ ಪಟ್ಟಿ ಕೊಟ್ಟಿರುವ ಅನುಬಂಧದಲ್ಲಿ ಗುರುತರವಾದ ಪ್ರಕರಣದ ಬಗ್ಗೆ ಕೊಟ್ಟಿದ್ದೆವೆ. ತಾವು ಹೇಳಿದ್ದು ಸರಿ ಇದು ಒಂದು ರೀತಿಯಲ್ಲಿ ರಿಚ್ಯುಯಲ್ ಆಗಿದೆ. ಸಾಮಾನ್ಯವಾಗಿ ಇದೊಂದು ರೂಢಿಯಾಗಿದೆ ಒಂದು ಪ್ರಕರಣ ಆಗುತ್ತದೆ. ನಾವು ಹೋಗುವುದಿಲ್ಲ, ಆಮೇಲೆ ಅಧಿಕಾರಿಗಳು ಹೋಗುವುದು, ಅದನ್ನು ನೋಡುವುದು, ಆಮೇಲೆ ಎಲ್ಲರೂ ಮರೆತು ಬಿಡತಕ್ಕದ್ದು. ಆದರೆ ಆ ಸಮುದಾಯದ ಮೇಲೆ ಏನು ಗಾಯವಾಗಿದೆ, ಏನು ನೋವು ಆಗಿದೆ, ಅದನ್ನು ಆರಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ತಾವು ಹೇಳಿದ ಪ್ರಕಾರ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರದ ಮನಸ್ಸಿನಲ್ಲಿ, ನನ್ನ ಮನಸ್ಸಿನಲ್ಲೂ ಕೂಡ ಇದೆ. ಅದು ಆಗದೆ ಇರುವುದಕ್ಕೆ ಕೆಲವು ಆರ್ಥಿಕವಾದಂಥ, ಸಾಮಾಜಿಕವಾದಂಥ, ರೂಢಮೂಲವಾದಂಥ ಪ್ರಸಂಗಗಳು ಇವೆ. ಅವುಗಳನ್ನೂ ನಾವು ಗುರುತಿಸಬೇಕಾಗಿದೆ. ಏನು ತಾಲ್ಲೂಕು ಮಟ್ಟದಲ್ಲಿ ಸಮಿತಿಗಳಿವೆ, ಜಿಲ್ಲಾ ಮಟ್ಟದಲ್ಲಿ ಸಮಿತಿಗಳಿವೆ, ಆ ಸಮಿತಿಗಳು ಬರೀ ಪ್ರಕರಣ ಆದ ಮೇಲೆ ಚರ್ಚೆ ಮಾಡುವುದು ಅಲ್ಲ, ಆರ್ಥಿಕ, ಸಾಮಾಜಿಕವಾದಂತಹ ಸಮಸ್ಯೆಗಳ ಬಗ್ಗೆ ಮೈಕ್ರೋ ಲೆವೆಲ್ ಸಮೀಕ್ಷೆ ಮಾಡಿ ಸಮಸ್ಯೆಗಳು ಯಾವ ರೀತಿ ಇವೆ, ಅವುಗಳ ಪಟ್ಟಿ ಆಯಾಯಾ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇದ್ದರೆ ಅದನ್ನು ಪರಿಹಾರಮಾಡಲಿಕ್ಕೆ ಈ ಸಮಿತಿಗಳು ಸಕ್ರಿಯವಾಗಿ ಕೆಲಸ ಮಾಡಬೇಕು. ಅದನ್ನು ನಾವು ಹೊಸದಾಗಿ ಪ್ರಾರಂಭ ಮಾಡುತ್ತೇವೆ.

ಎರಡನೆಯದಾಗಿ, ತಾವು ಹೇಳಿದ ಪ್ರಕಾರ ನಾವು ಬರೀ ಅಧಿಕಾರಿಗಳ ಮಟ್ಟದಲ್ಲಿ ಅಲ್ಲ, ಕ್ಯಾಬಿನೆಟ್ ಮಟ್ಟದ ಒಂದು ಸ್ಟ್ಯಾಂಡಿಂಗ್ ಕಮಿಟಿ ಮಾಡಿ, ದೌರ್ಜನ್ಯದ ಬಗ್ಗೆ ಪ್ರತಿ ತಿಂಗಳೂ ಕೂಡ ರಿವ್ಯೂ ಮಾಡಿಕೊಂಡು ಅದನ್ನು ನಮಗೆ ಕೊಟ್ಟು, ಅದು ಯಾವರೀತಿಯಲ್ಲಿ ನಡೆಯುತ್ತಾ ಇದೆ, ಅದನ್ನು ಏಕೆ ನಿಲ್ಲಿಸಬಾರದು, ಮುಂದೆ ಆದರೂ ಕೂಡ ಅದನ್ನು ಪರಿಹಾರ ಮಾಡಲಿಕ್ಕೆ ಬೇಕಾದಂತಹ ಈ ರೀತಿ ಕೆಲವು ಹೊಸ ಕಾರ್ಯಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಬರಲಿಲ್ಲ. ನಿಮಗೆ ಹಿಂದುಳಿದ ವರ್ಗಗಳ ಬಗ್ಗೆ, ಬಡವರ ಬಗ್ಗೆ ಕಾಳಜಿ, ಕಳಕಳಿ ಇದೆ. ಈ ದೌರ್ಜನ್ಯಗಳನ್ನು ತಡೆಗಟ್ಟಲು ಏನಾದರೊಂದು ಪರ್ಯಾಯ ಕಾರ್ಯಕ್ರಮವನ್ನು ಹುಡುಕಬೇಕೆಂಬ ಮನಸ್ಸು ನಿಮಗಿದೆ. ಆದರೆ ಆರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ಇದುವರೆಗೂ ಯಾವುದೇ ಪ್ರಯೋಜವೂ ಆಗಿಲ್ಲ. ಇಲ್ಲಿ ಕೊಡತಕ್ಕದ್ದೂ ಕೂಡ ಜಾರಿಕೆ ಹಾರಿಕೆ ಉತ್ತರ ಆಗಬಾರದು. ವಿಶೇಷ ನ್ಯಾಯಾಲಯಗಳು ಸ್ಥಾಪನೆ ಆದಮೇಲೆ ಹರಿಜನರ ಮೇಲೆ ಆದಂಥ ಎಷ್ಟು ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇದುವರೆಗೆ ವಿಚಾರಣೆ ಮಾಡಲಾಗಿದೆ ?ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬುದು ಬಹಳ ಮುಖ್ಯವಾದುದು. ಎಷ್ಟೋ ಸಂದರ್ಭಗಳಲ್ಲಿ ಹರಿಜನರ ಮೇಲೆ ದೌರ್ಜನ್ಯವನ್ನು ಮಾಡಿದ ವ್ಯಕ್ತಿಗಳನ್ನು ಪೋಲೀಸರು ಕೇವಲ ನಾಮಕಾವಸ್ತೆಗೆ ಅರೆಸ್ಟ್ ಎಂದು ಮಾಡುತ್ತಾರೆ. ಅಟ್ರಾಸಿಟೀಸ್ ಆಕ್ಟ್ ಪ್ರಕಾರ ಒಂದು ತಿಂಗಳವರೆಗೆ ಜಾಮೀನು ಸಿಗುವುದಿಲ್ಲ. ಆದ್ದರಿಂದ ಅವರನ್ನು ಒಂದು ತಿಂಗಳವರೆಗೆ ಮಾರದ್ದೋ ದೊಡ್ಡ ವ್ಯಕ್ತಿಗಳ ಮನೆಗಳಲ್ಲಿ ಬಚ್ಚಿಟ್ಟು ಅನಂತರ ರಾಜೋಪಚಾರಮಾಡಿ ಕರೆದುಕೊಂಡುಬಂದು ನ್ಯಾಯಾಲಯದ ಮುಂದೆ ಅಥವಾ ಪೋಲೀಸ್ ಸ್ಟೇಷನ್‌ಗೆ ಸರೆಂಡರ್ ಮಾಡುತ್ತಾರೆ. ನನಗೆ ಒಂದು ಪ್ರಕರಣ ಇನ್ನೂ ನೆನಪಿದೆ. ಚಿಕ್ಕಮಗಳೂರಿನಲ್ಲಿ ಬಸ್ಸಿಗೆ ಬೆಂಕಿ ಹಚ್ಚಿದ ವ್ಯಕ್ತಿಗಳನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದು ಎಳನೀರನ್ನು ಕೊಟ್ಟು ರಾಜೋಪಚಾರವನ್ನು ನೀಡಿದ್ದಾರೆ. ಇಂಥಾದ್ದೆಲ್ಲಾ ನಡೆಯುತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ಯಾವ ಅಧಿಕಾರಿಗಳು, ಯಾವ ವ್ಯಕ್ತಿಗಳು ಇಂಥ ದೌರ್ಜನ್ಯ ಮಾಡಿದವರಿಗೆ ರಕ್ಷಣೆಯನ್ನು ಕೊಡುತ್ತಾರೆ ಮತ್ತು ಯಾರು ಇದಕ್ಕೆ ಕಾರಣಕರ್ತರಾಗಿರುತ್ತಾರೆ ಅಂಥವರಿಗೆ ಕಠಿಣ ಶಿಕ್ಷೆಯನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆಗಮಾತ್ರ ಇಂಥ ಪ್ರಕರಣಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ

ಸಾಧ್ಯವಿಲ್ಲ. ನಾವು ಕೇವಲ ಕಮಿಟಿಗಳನ್ನು ಮಾಡುವುದರಿಂದ, ಕ್ಯಾಬಿನೆಟ್ ಕಮಿಟಿಗಳನ್ನು ರಚನೆ ಮಾಡುವುದರಿಂದ ಏನೂ ಪ್ರಯೋಜನವಾಗಲಾರದು. ಇನ್ನೊಂದು ವಿಚಾರ ಏನೆಂದರೆ, ಯಾರು ಹರಿಜನರಿಗೆ ಬಹಿಷ್ಕಾರ ಹಾಕುತ್ತಾರೆ, ಅದಕ್ಕಿಂತ ಹೀನ ಕೃತ್ಯ ಬೇರೆ ಇಲ್ಲ. ಇವತ್ತು ಈ ಸಮಾಜದಲ್ಲಿ ಬಹಿಷ್ಕಾರದಂಥ ಪ್ರಕರಣಗಳು ನಡೆಯುತ್ತಿವೆ ಎಂದರೆ ನಾವೆಲ್ಲರೂ ತಲೆತಗ್ಗಿಸಲೇಬೇಕಾಗಿದೆ. ಅಂಥ ಜನರ ವಿರುದ್ಧ ಸರ್ಕಾರ ಬಹಿಷ್ಕಾರವನ್ನು ಹಾಕಬೇಕು. ಅವರಿಗೆ ಕುಡಿಯುವ ನೀರನ್ನೂ ಕೂಡ ಕೊಡಕೂಡದು. ಏಕೆಂದರೆ ನಾವು ಅವರಿಗೆ ನೀರನ್ನು, ಎಲೆಕ್ಟ್ರಿಸಿಟಿಯನ್ನು ಕೊಡುತ್ತಿದ್ದೇವೆ. ಅದನ್ನೆಲ್ಲಾ ನಿಲ್ಲಿಸಬೇಕು. ಈ ಕೆಲಸವನ್ನು ನೀವು ಮಾಡುತ್ತೀರಾ? ಈ ಕೆಲಸವನ್ನು ನೀವು ಮಾಡುವವರೆಗೂ ಈ ಸಮಾಜದಲ್ಲಿ ಹರಿಜನರಮೇಲಿನ ದೌರ್ಜನ್ಯ, ಹೀನ ಕೃತ್ಯಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಶಿವಮೂರ್ತಿ:- ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯವೆಂದು ನಾವು ಪರಿಗಣಿಸಬೇಕಾಗುತ್ತದೆ. ೧೨ನೇ ಶತಮಾನದಲ್ಲಿ ಬಸವಣ್ಣನವರು ಏನು ಹೇಳಿದರೋ ಅಲ್ಲದೆ ಇಲ್ಲಿಯವರೆಗೆ ಅಂದರೆ ೨೦ನೇ ಶತಮಾನ ಮುಗಿಯುತ್ತಾ ಬಂದರೂ ಕೊನೇ ಪಕ್ಷ ಇದನ್ನು ಅಂತ್ಯ ಮಾಡುವುದಕ್ಕಾದರೂ ನಮ್ಮಲ್ಲಿ ಒಂದು ಕಾನೂನು ಇದೆಯೆ? ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ನಮ್ಮಲ್ಲಿ ಇದಕ್ಕೆ ಒಂದು ಕಾನೂನು ಇದೆ. ಆದರೆ ಇದರಲ್ಲಿ ಅಷ್ಟು ಎಫೆಕ್ಟೀವ್‌ನೆಸ್ ಇಲ್ಲ. ಹರಿಜನರಮೇಲೆ ಆಗತಕ್ಕ ದೌರ್ಜನ್ಯಗಳನ್ನು ನಾವು ನೋಡುತ್ತಿದ್ದೇವೆ. ಶ್ರೀಮತಿ ಮೋಟಮ್ಮನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಿತಿಯ ಅಧ್ಯಕ್ಷರಾಗಿದ್ದು ಸರ್ಕಾರಕ್ಕೆ ಒಂದು ಶಿಫಾರಸನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಚಾಲನೆಯನ್ನು ಕೊಟ್ಟರೆ ಅದರಿಂದ ಜನರಲ್ಲಿ ಹೆದರಿಕೆ ಬಂದು ಈ ಕಾನೂನಿಗೆ ಒಂದು ಅರ್ಥ ಬರುತ್ತದೆಂದು ನಾನು ಒತ್ತಾಯಮಾಡುತ್ತೇನೆ. ನಾವು ೨೧ನೇ ಶತಮಾನಕ್ಕೆ ಹೋಗುವಾಗ ಇದನ್ನು ೨೦ನೇ ಶತಮಾನಕ್ಕಾದರೂ ಬಿಟ್ಟು ಹೋಗೋಣ. ೨೧ನೇ ಶತಮಾನದಲ್ಲಿ ನಾವು ಹೊಸದನ್ನು ಮಾಡಿದ್ದೇವೆಂದು ಹೇಳೋಣ. ಮಾನವೀಯ ದೃಷ್ಟಿಯಿಂದ ಕಾನೂನು, ಸ್ಪೆಷಲ್ ಕೋರ್ಟ್, ಪೋಲೀಸರನ್ನು ಕಳುಹಿಸುತ್ತೇವೆ, ಅಧಿಕಾರಿಗಳನ್ನು ಕಳುಹಿಸುತ್ತೇವೆಂದು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಈ ವರ್ಗದ ಜನರಲ್ಲಿ ಬಹಳ ದೊಡ್ಡ ಅನುಮಾನ ಬೆಳೆದಿದೆ. ಏಕೆಂದರೆ ಈ ಕಾನೂನಿಗೆ ಒಂದು ಅರ್ಥ ಇಲ್ಲ, ಈ ಸರ್ಕಾರಕ್ಕೆ ಒಂದು ಅರ್ಥ ಇಲ್ಲ, ಈ ವ್ಯವಸ್ಥೆಗೆ ಒಂದು ಅರ್ಥ ಇಲ್ಲ ಎನ್ನತಕ್ಕ ಭಾವನೆ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ೧೯೯೦ನೇ ಸಾಲಿನಲ್ಲಿ ೩೬೦ ದೌರ್ಜನ್ಯ ಪ್ರಕರಣಗಳು ನ್ಯಾಯಾಲಯದಲ್ಲಿವೆ. ೧೯೯೧ನೇ ಇಸವಿಯಲ್ಲಿ ೫೦೯, ೧೯೯೨ನೇ ಇಸವಿಯಲ್ಲಿ ೪೧೦ ಪ್ರಕರಣಗಳು. ಶಿಕ್ಷೆಗೆ ಒಳಗಾದ ಪ್ರಕರಣಗಳು ೧೯೯೦ನೇ ಇಸವಿಯಲ್ಲಿ ೧೫, ೧೯೯೧ನೇ ಇಸವಿಯಲ್ಲಿ ೧, ೧೯೯೨ರ ಸಾಲಿನ ವರದಿ ಇದುವರೆಗೂ ನಮಗೆ ಬಂದಿಲ್ಲ. ಶ್ರೀಮತಿ ಮೋಟಮ್ಮನವರು ವಿಶೇಷವಾಗಿ ಒಪ್ಪಿಸಿದ ವರದಿಯ ಬಗ್ಗೆ ತಾವು ಹೇಳಿದಿರಿ. ಇದರ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಮೋಟಮ್ಮನವರೂ ಹಾಗೂ ಮಾನ್ಯ ಶಿವಮೂರ್ತಿಯವರು ಹೇಳಿದಂಥ ಸಲಹೆಗಳನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಂಡು ಅವುಗಳನ್ನು ವ್ಯಾವಹಾರಿಕವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ.